# ಹಬ್ಬದ ಸಡಗರ ಹೆಚ್ಚಳಕ್ಕೆ ಫ್ಲಿಪ್ ಕಾರ್ಟ್ ಸಪ್ಲೈ ಚೇನ್ ವಿಸ್ತರಣೆ

- **ಭಾರತ್ ನಿರ್ಮಾಣಕ್ಕೆ ಸಹಕಾರಿಯಾಗುವ ನಿಟ್ಟಿನಲ್ಲಿ ವಿಸ್ತರಣಾ ಯೋಜನೆ**
- **ಕಟ್ಟ ಕಡೆಯ ಗ್ರಾಹಕನಿಗೂ ಸೇವೆ ಸಲ್ಲಿಸಲು 3000 ಕ್ಕೂ ಅಧಿಕ ಸೌಲಭ್ಯಗಳು**
- **3 ಮತ್ತು ಅದಕ್ಕಿಂತ ಕಡಿಮೆ ಹಂತದ ನಗರಗಳಲ್ಲಿಯೂ ಅಸ್ತಿತ್ವ ಸ್ಥಾಪನೆಗೆ ಕ್ರಮ**
- **ಮೂಲಸೌಕರ್ಯಗಳ ವಿಸ್ತರಣೆಯು ಹೊಸ ಜೀವನೋಪಾಯ ಅವಕಾಶಗಳನ್ನು ಕಲ್ಪಿಸುತ್ತದೆ, ಎಂಎಸ್ಎಂಇಗಳಿಗೆ, ಮಾರಾಟಗಾರರು ಮತ್ತು ಕುಶಲಕರ್ಮಿಗಳು ಮಾರುಕಟ್ಟೆ ಸನಿಹಕ್ಕೆ ಬರಲು ನೆರವಾಗುತ್ತದೆ**

ಬೆಂಗಳೂರು, ಅಕ್ಟೋಬರ್ 08, 2020: ಭಾರತದ ದೇಶೀಯ ಇ-ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ಆನ್ ಲೈನ್ ನಲ್ಲಿನ ಹಾಲಿ ಇರುವ ಮತ್ತು ಹೊಸದಾದ ಲಕ್ಷಾಂತರ ಗ್ರಾಹಕರ ಅಗತ್ಯಗಳನ್ನು ಪೂರೈಸುವುದು ಮತ್ತು ಲಕ್ಷಾಂತರ ಎಂಎಸ್ಎಂಇಗಳು, ಮಾರಾಟಗಾರರು, ಕುಶಲಕರ್ಮಿಗಳು ಮತ್ತು ಕಿರಾಣಗಳಿಗೆ ನೆರವಾಗುವ ನಿಟ್ಟಿನಲ್ಲಿ  ದೇಶಾದ್ಯಂತ ತನ್ನ ಸಪ್ಲೈ ಚೇನ್ ಅನ್ನು ಗಣನೀಯ ಪ್ರಮಾಣದಲ್ಲಿ ವಿಸ್ತರಣೆ ಮಾಡಿದೆ. ಮುಂಬರುವ ಹಬ್ಬದ ಋತು ಮತ್ತು ಬಿಗ್ ಬಿಲಿಯನ್ ಡೇಸ್ (ಬಿಬಿಡಿ) ನಲ್ಲಿ ಭಾರತ್ ನ ಗ್ರಾಹಕರಿಂದ ಬರುವ ಹೆಚ್ಚಿನ ಬೇಡಿಕೆಗಳನ್ನು ಈಡೇರಿಸುವ ದಿಸೆಯಲ್ಲಿ ಫ್ಲಿಪ್ ಕಾರ್ಟ್ ಈ ಭಾರೀ ಪ್ರಮಾಣದ ಮೂಲಸೌಕರ್ಯದ ಹೂಡಿಕೆ ಮಾಡುತ್ತಿದೆ. ವಿಸ್ತರಣೆ ಮಾಡಿದೆ. ಹಬ್ಬದ ಸಂದರ್ಭದಲ್ಲಿ ಈ ಪ್ರಕ್ರಿಯೆಯ ಭಾಗವಾಗಿ ದೇಶಾದ್ಯಂತ ಕಟ್ಟಕಡೆಯ ಪ್ರದೇಶದ ಗ್ರಾಹಕನಿಗೆ ಇ-ಕಾಮರ್ಸ್ ಅನುಭವವನ್ನು ನೀಡುವ ಮತ್ತು ಉತ್ಪನ್ನಗಳನ್ನು ತಲುಪಿಸಲು ಫ್ಲಿಪ್ ಕಾರ್ಟ್ 3000 ಕ್ಕೂ ಅಧಿಕ ಸೌಲಭ್ಯಗಳನ್ನು ಕಲ್ಪಿಸಿದೆ. ಈ ವಿಸ್ತರಣೆಯಿಂದಾಗಿ ಸಣ್ಣಪುಟ್ಟ ಪಟ್ಟಣಗಳಲ್ಲಿನ ಲಕ್ಷಾಂತರ ಮಾರಾಟಗಾರರು, ಎಂಎಸ್ಎಂಇಗಳು ಮತ್ತು ಕುಶಲಕರ್ಮಿಗಳು ಫ್ಲಿಪ್ ಕಾರ್ಟ್ ನ ಸಪ್ಲೈ ಚೇನ್ ಮೂಲಕ ದೇಶಾದ್ಯಂತ ಇರುವ ಗ್ರಾಹಕರಿಗೆ ತಮ್ಮ ಉತ್ಪನ್ನಗಳನ್ನು ತಲುಪಿಸಬಹುದಾಗಿದೆ.

ಒಟ್ಟಾರೆ, ಫ್ಲಿಪ್ ಕಾರ್ಟ್ ದೇಶಾದ್ಯಂತ ಇರುವ ಫುಲ್ ಫಿಲ್ ಮೆಂಟ್ ಕೇಂದ್ರಗಳು, ಮದರ್ ಹಬ್ಸ್ ಮತ್ತು ವಿತರಣಾ ಕೇಂದ್ರಗಳು ಸೇರಿದಂತೆ ತನ್ನ ಸಪ್ಲೈ ಚೇನ್ ವ್ಯವಸ್ಥೆಯನ್ನು 3.4 ದಶಲಕ್ಷ ಚದರಡಿಗೂ ಹೆಚ್ಚು ವಿಸ್ತೀರ್ಣವನ್ನು ಹೊಂದಿದೆ. ಈ ದೊಡ್ಡ ಮಟ್ಟದ ಫುಲ್ ಫಿಲ್ಮೆಂಟ್ ಕೇಂದ್ರಗಳನ್ನು 5 ಲಕ್ಷ ಚದರಡಿವರೆಗೂ ವಿಸ್ತರಣೆ ಮಾಡಲು ಸಾಧ್ಯವಿದ್ದು, ಮಾರಾಟಗಾರರು ಮತ್ತು ಖರೀದಿದಾರರ ನಡುವೆ ಉತ್ಪನ್ನಗಳ ತಡೆರಹಿತ ಸಾಗಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ. ಮದರ್ ಹಬ್ಸ್ ಅಥವಾ ವಿಂಗಡಣಾ ಕೇಂದ್ರಗಳು ಮತ್ತು ವಿತರಣಾ ಕೇಂದ್ರಗಳೊಂದಿಗೆ ಈ ಫುಲ್ ಫಿಲ್ಮೆಂಟ್

ಕೇಂದ್ರಗಳು ದೇಶಾದ್ಯಂತ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ದೊಡ್ಡ ಮಟ್ಟದಲ್ಲಿ ಉದ್ಯೋಗ ಸೃಷ್ಟಿ ಮಾಡಲು ಸಹಕಾರಿಯಾಗಲಿವೆ.

ಇದರ ಜತೆಗೆ ಇದೀಗ ಫ್ಲಿಪ್ ಕಾರ್ಟ್ ನ ಒಟ್ಟು ದಾಸ್ತಾನಿನ ವಿಸ್ತೀರ್ಣ 18 ದಶಲಕ್ಷ ಚದರಡಿಗೆ ತಲುಪಿದೆ. ಇದಲ್ಲದೇ, ಲಕ್ಷಾಂತರ ಚದರಡಿಯಷ್ಟು ಸ್ವತ್ತು ಪಾಲುದಾರ ಬ್ರ್ಯಾಂಡ್ ಗಳಿಗೆ ಸೇರಿದೆ. ಇದರಿಂದಾಗಿ ದೇಶಾದ್ಯಂತ 50,000 ಕ್ಕೂ ಅಧಿಕ ಕಿರಾಣಗಳನ್ನು ಮಾರುಕಟ್ಟೆ ಜಾಲಕ್ಕೆ ಸೇರ್ಪಡೆ ಮಾಡಿಕೊಂಡು ಜಾಲವನ್ನು ಸದೃಢಗೊಳಿಸಿಕೊಳ್ಳಲು ಸಾಧ್ಯವಾಗುತ್ತಿದೆ ಮತ್ತು ಗ್ರಾಹಕರಿಗೆ ಹಬ್ಬದ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಶಿಪ್ ಮೆಂಟ್ ಗಳನ್ನು ತಲುಪಿಸುವ ವ್ಯವಸ್ಥೆಯನ್ನು ಮಾಡಲು ಸಾಧ್ಯವಾಗುತ್ತದೆ.

ಫ್ಲಿಪ್ ಕಾರ್ಟ್ ನ ಇ-ಕಾರ್ಟ್ ಮತ್ತು ಮಾರ್ಕೆಟ್ ಪ್ಲೇಸ್ ನ ಹಿರಿಯ ಉಪಾಧ್ಯಕ್ಷರಾದ ಅಮಿತೇಶ್ ಝಾ ಅವರು ಈ ಬಗ್ಗೆ ಮಾತನಾಡಿ, ``ಇ-ಕಾಮರ್ಸ್ ನ ಸಮಾನವಾದ ವಿತರಣೆಯ ಪ್ರಯೋಜನಗಳನ್ನು ಆನ್ ಲೈನ್ ಗ್ರಾಹಕರಿಗೆ ತಲುಪಿಸಲು ಫ್ಲಿಪ್ ಕಾರ್ಟ್ ಬದ್ಧವಾಗಿದೆ. ಸಾಂಕ್ರಾಮಿಕ ಪರಿಸ್ಥಿತಿಯು ದೇಶಾದ್ಯಂತ ನಮ್ಮ ಸಪ್ಲೈ ಚೇನ್ ಅನ್ನು ವಿಸ್ತರಣೆ ಮಾಡಲು ಅದರಲ್ಲೂ ವಿಶೇಷವಾಗಿ ಸಣ್ಣ ನಗರಗಳಲ್ಲಿ ವಿಸ್ತರಣೆ ಮಾಡಲು ಕಾರಣವಾಗಿದೆ. ಈ ಪ್ರದೇಶಗಳಲ್ಲಿ ಇ-ಕಾಮರ್ಸ್ ಸೇವೆಗಳಿಗೆ ಸಾಕಷ್ಟು ಬೇಡಿಕೆಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ನಮ್ಮ ಸಪ್ಲೈ ಚೇನ್ ಅನ್ನು ವಿಸ್ತರಣೆ ಮಾಡುತ್ತಿದ್ದೇವೆ. ಇದಲ್ಲದೇ, ಮುಂದಿನ ಕೆಲವು ವರ್ಷಗಳಲ್ಲಿ ಇ-ಕಾಮರ್ಸ್ ಕ್ಷಿಪ್ರಗತಿಯಲ್ಲಿ ಕಾಣುವ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಈ ವಿಸ್ತರಣೆಗೆ ಮುಂದಾಗಿದ್ದೇವೆ. ಈ ವಿಸ್ತರಣೆಯು ದೇಶಾದ್ಯಂತ ಲಕ್ಷಾಂತರ ಗ್ರಾಹಕರನ್ನು ಮಾರಾಟಗಾರರು ಮತ್ತು ಕುಶಲಕರ್ಮಿಗಳ ಮಧ್ಯೆ ಸಂಬಂಧವನ್ನು ಸಮರ್ಥವಾಗಿ ಬೆಸೆಯಲು ಕಾರಣವಾಗುತ್ತದೆ. ಈ ಹೆಚ್ಚುವರಿ ವಿಸ್ತರಣೆಯಿಂದಾಗಿ ಸ್ಥಳೀಯ ಮಟ್ಟದಲ್ಲಿ ಉದ್ಯೋಗವಕಾಶಗಳನ್ನು ವೃದ್ಧಿಸಿಕೊಳ್ಳಲು ಅದರಲ್ಲೂ ವಿಶೇಷವಾಗಿ ಲಾಕ್ ಡೌನ್ ನಿಂದಾಗಿ ತಮ್ಮ ಸ್ಥಳಗಳಿಗೆ ಅಂದರೆ ಊರುಗಳಿಗೆ ವಾಪಸಾಗಿರುವ ಜನರಿಗೆ ಉದ್ಯೋಗವಕಾಶಗಳನ್ನು ಕಲ್ಪಿಸುತ್ತದೆ. ಇದರ ಜತೆಗೆ ಫ್ಲಿಪ್ ಕಾರ್ಟ್ ನೊಂದಿಗೆ ಸೇರಿ ತಮ್ಮ ವ್ಯವಹಾರದ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಸ್ಥಳೀಯ ವ್ಯವಹಾರಸ್ಥರಿಗೆ ಉತ್ತಮ ಅವಕಾಶವನ್ನು ಕಲ್ಪಿಸುತ್ತದೆ'' ಎಂದರು.

ಇ-ಕಾಮರ್ಸ್ ನ ಮೌಲ್ಯ ಮತ್ತು ಅನುಕೂಲತೆಗಳನ್ನು ಅನುಭವಿಸಲು ಆನ್ ಲೈನ್ ಗೆ ಬರುವ ಸಣ್ಣ ನಗರಗಳ ಲಕ್ಷಾಂತರ ಗ್ರಾಹಕರಿಗೆ ಸೇವೆ ಸಲ್ಲಿಸಲು ಸಪ್ಲೈ ಚೇನ್ ಸ್ವತ್ತುಗಳ ಈ ವಿಸ್ತರಣೆ ಜಾಲ ಪ್ರಮುಖವಾಗಿದೆ. ಇದಲ್ಲದೇ, ಮೆಟ್ರೋ ನಗರಗಳು ಮತ್ತು 2 ಹಾಗೂ 3 ನೇ ಹಂತದ ನಗರಗಳಲ್ಲಿ

ಫ್ಲಿಪ್ ಕಾರ್ಟ್ ನ ಉಪಸ್ಥಿತಿಯನ್ನು ಬಲವರ್ಧನೆಗೊಳಿಸಲಿದೆ ಮತ್ತು ಅದಕ್ಕೂ ಮಿಗಿಲಾಗಿ ಲಡಾಕ್, ಬಿಷ್ಣುಪುರ (ಮಣಿಪುರ) ಮತ್ತು ದಿಮಾಪುರ(ನಾಗಾಲ್ಯಾಂಡ್) ನಂತಹ ಪ್ರದೇಶಗಳಲ್ಲಿಯೂ ಉಪಸ್ಥಿತಿಯನ್ನು ಹೊಂದಲಿದೆ. ಇಂತಹ ಪ್ರದೇಶಗಳಲ್ಲಿಯೂ ಫ್ಲಿಪ್ ಕಾರ್ಟ್ ಸಾವಿರಾರು ಉದ್ಯೋಗಗಳ ಅವಕಾಶಗಳನ್ನು ಸೃಷ್ಟಿ ಮಾಡಲಿದೆ. ಈ ಹಬ್ಬದ ಸಂದರ್ಭದಲ್ಲಿ ಫ್ಲಿಪ್ ಕಾರ್ಟ್ ದೇಶಾದ್ಯಂತ ತನ್ನ ಸಪ್ಲೈ ಚೇನ್ ಮೂಲಕ 70,000 ಕ್ಕೂ ಅಧಿಕ ನೇರ ಉದ್ಯೋಗಗಳು ಮತ್ತು ಲಕ್ಷಾಂತರ ಪರೋಕ್ಷ ಉದ್ಯೋಗಗಳನ್ನು ಸೃಷ್ಟಿ ಮಾಡಲಿದೆ.

ಕೋವಿಡ್-19 ಪ್ರೇರಿತವಾದ ಸಾಂಕ್ರಾಮಿಕವು ಗ್ರಾಹಕ ಖರೀದಿ ಮಾದರಿಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿದೆ ಮತ್ತು ಮಾರಾಟಗಾರರ ಉತ್ಪನ್ನಗಳ ವಿಭಾಗಗಳಲ್ಲಿ ಆನ್ ಲೈನ್ ಪ್ಲಾಟ್ ಫಾರ್ಮ್ ಗಳ ಪರಿವರ್ತನೆಯನ್ನು ವೇಗಗೊಳಿಸುವಂತೆ ಮಾಡಿದೆ. ಏಕೆಂದರೆ, ಗ್ರಾಹಕರು ತಮ್ಮ ಜೀವನದಲ್ಲಿ ಇ-ಕಾಮರ್ಸ್ ನಲ್ಲಿ ಮೌಲ್ಯವರ್ಧಿತ ಅಂಶಗಳನ್ನು ಬಯಸುತ್ತಾರೆ. ದಿನಸಿಯಿಂದ ಸ್ವಚ್ಛಗೊಳಿಸುವ ಉತ್ಪನ್ನಗಳು, ಡಬ್ಲ್ಯೂ ಎಫ್ಎಚ್ ಫರ್ನಿಚರ್ ನಿಂದ ಹೋಂ ಅಪ್ಲೈಯನ್ಸಸ್ ವರೆಗೆ ಅಗತ್ಯ ವಸ್ತುಗಳನ್ನು ಖರೀದಿಸುವಲ್ಲಿ ಇ-ಕಾಮರ್ಸ್ ದೇಶಾದ್ಯಂತ ಗ್ರಾಹಕರು ಮತ್ತು ಮಾರಾಟಗಾರರ ಆದ್ಯತೆಯ ಆಯ್ಕೆಯಾಗಿದೆ. ಸಾಂಕ್ರಾಮಿಕಕ್ಕಿಂತ ಮುನ್ನ ಮೆಟ್ರೋ ನಗರಗಳಲ್ಲಿ ಈ ಪ್ರವೃತ್ತಿ ಹೆಚ್ಚಿತ್ತು. ಆದರೆ, ಸಾಂಕ್ರಾಮಿಕದ ನಂತರ 2 ಮತ್ತು 3 ನೇ ಹಂತದ ನಗರಗಳಲ್ಲಿ ಗ್ರಾಹಕರು ಮತ್ತು ಮಾರಾಟಗಾರರ ಖರೀದಿ ಮತ್ತು ಮಾರಾಟ ಪ್ರಕ್ರಿಯೆಗೆ ವೇಗವನ್ನು ತಂದುಕೊಟ್ಟಿದೆ. ಈ ಹಬ್ಬದ ಸಂದರ್ಭದಲ್ಲಿ ಫ್ಲಿಪ್ ಕಾರ್ಟ್ ಇಂತಹ ಪ್ರದೇಶಗಳಲ್ಲಿ ತನ್ನ ಸಪ್ಲೈ ಚೇನ್ ಅನ್ನು ವಿಸ್ತರಣೆ ಮಾಡುವ ಮೂಲಕ ಗ್ರಾಹಕರು, ಮಾರಾಟಗಾರರು, ಕುಶಲಕರ್ಮಿಗಳು ಮತ್ತು ಇತರೆ ಪರಿಸರ ವ್ಯವಸ್ಥೆಯ ಪಾಲುದಾರರಿಗೆ ನಿರ್ಣಾಯಕ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿದೆ.

ಈ ಬಾರಿಯ ಹಬ್ಬದ ಸಂದರ್ಭ ಮತ್ತು ಬಿಗ್ ಬಿಲಿಯನ್ ಡೇಸ್ ಸಂದರ್ಭದಲ್ಲಿ ಫ್ಲಿಪ್ ಕಾರ್ಟ್ ತನ್ನ ಸಪ್ಲೈ ಚೇನ್ ಮೂಲಕ ದೊಡ್ಡ ಮಟ್ಟದಲ್ಲಿ ಉದ್ಯೋಗ ಸೃಷ್ಟಿ ಮಾಡುತ್ತಿದೆ. ಅಲ್ಲದೇ, ಫ್ಲಿಪ್ ಕಾರ್ಟ್ ನ ಸಪ್ಲೈ ಚೇನ್ ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರು ಸೇರ್ಪಡೆಯಾಗುವಂತೆ ಮಾಡಲಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution, with a registered customer base of over 250 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for

pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, PhonePe, India's fastest growing digital payments platform, and now Flipkart Wholesale, the Flipkart Group will continue to steer the transformation of commerce in India through technology.

**For more information, please contact media@flipkart.com**